73

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 719(871) |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 13.03.2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗವು ಡಿಸೆಂಬರ್ 29ರಂದು ನಡೆಸಿದ ಕೆ.ಎ.ಎಸ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಸಾಕಷ್ಟು ಲೋಪದೋಷಗಳಿದ್ದರೂ ಸಹ ಅಧಿಕಾರಿಗಳು ತಪ್ಪು ಮಾಹಿತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:29-12-2024ರಂದು ನಡೆಸಿದ ಗೆಜೆಟೆಡ್ ಪ್ರೊಬೆಷನರ್ ಪೂರ್ವಭಾವಿ ಮರುಪರೀಕ್ಷೆಗೆ ಸಂಬಂಧಿಸಿದಂತೆ, ಕೆಎಎಸ್ ಆಕಾಂಕ್ಷಿಗಳು ಸಲ್ಲಿಸಿರುವ ಮನವಿಗಳಲ್ಲಿ ದಿನಾಂಕ: 29-12-2024 ರಂದು ನಡೆದ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರುಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯ ಭಾಷಾಂತರದಲ್ಲಿ ಲೋಪದೋಷಗಳ ಬಗ್ಗೆ ಪರೀಕ್ಷಾರ್ಥಿಗಳಿಗೆ ಗೊಂದಲ ಉಂಟಾಗಿರುವುದಾಗಿ ಅಭ್ಯರ್ಥಿಗಳು ಹಾಗೂ ಸಂಘ/ ಸಂಸ್ಥೆಗಳು ಮನವಿ ಸಲ್ಲಿಸಿರುತ್ತಾರೆ.<br><br>ಈ ಕುರಿತು ಪರಿಶೀಲಿಸುವ ಸಲುವಾಗಿ, ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ಮೂವರು ವಿಷಯ ತಜ್ಞರುಗಳ ಸಮಿತಿಗಳನ್ನು ರಚಿಸಿ ಅಭಿಪ್ರಾಯವನ್ನು ಪಡೆಯಲಾಗಿದ್ದು, ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ ಕೆಲವು ಪ್ರಶ್ನೆಗಳಿಗೆ ಕೃಪಾಂಕ ಹಾಗೂ ಕೆಲವು ಪ್ರಶ್ನೆಯ ಕೀ-ಉತ್ತರವನ್ನು ಪರಿಷ್ಕರಿಸಬೇಕೆಂದು, ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸವಿದ್ದರೂ ಸಹ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬಹುದೆಂದು, ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ಮುದ್ರಣ ದೋಷವಾಗಿರುವುದಾಗಿಯೂ ಹಾಗೂ ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ವ್ಯತ್ಯಾಸವಿರುವುದಿಲ್ಲವೆಂದು ಅಭಿಪ್ರಾಯ ನೀಡಿದ್ದು, ಸಮಿತಿಯ ಅಭಿಪ್ರಾಯದಂತೆ ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ 5 ಪ್ರಶ್ನೆಗಳಿಗೆ ಕೃಪಾಂಕ ಹಾಗೂ 1 ಪ್ರಶ್ನೆಗೆ ಕೀ ಉತ್ತರವನ್ನು ಪರಿಷ್ಕರಿಸಲಾಗಿರುತ್ತದೆ. |

| | | |
|---|---|---|
| ಆ | ಕೆಎಎಸ್ ಮರು ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿ ದೊಡ್ಡ ಮಟ್ಟದಲ್ಲಿ ಅಭ್ಯರ್ಥಿಗಳಿಂದ ಮತ್ತು ವಿವಿಧ ಕನ್ನಡಪರ ಸಂಘಟನೆಗಳಿಂದ ಹೋರಾಟಗಳು ಮತ್ತು ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದ್ದರೂ ಇದುವರೆಗು ಯಾವುದೇ ನಿರ್ಧಾರ ಕೈಗೊಳ್ಳದೇ ಇರಲು ಕಾರಣವೇನು; | ಆಯೋಗವು ಈ ಹಿಂದಿನ ಪರೀಕ್ಷೆಗಳ ತುಲನಾತ್ಮಕ ದತ್ತಾಂಶ ವಿಶ್ಲೇಷಣೆಯನ್ನು ನಡೆಸಿದ ನಂತರ 2023-24ನೇ ಸಾಲಿನಲ್ಲಿ ಕನ್ನಡ ಮಾಧ್ಯಮ ಪರೀಕ್ಷೆಯನ್ನು ತೆಗೆದುಕೊಂಡು ಮುಖ್ಯ ಪರೀಕ್ಷೆಗೆ ಅರ್ಹರಾದ ಕನ್ನಡ ಮಾಧ್ಯಮ ಅಭ್ಯರ್ಥಿಗಳ ಸಂಖ್ಯೆಗೂ, ಗೆಜೆಟೆಡ್ ಪ್ರೊಬೆಷನರ್ಸ್ 2017-18 ರಲ್ಲಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಯನ್ನು ತೆಗೆದುಕೊಂಡು ಅರ್ಹರಾಗಿದ್ದವರ ಸಂಖ್ಯೆಗೂ ಹೋಲಿಸಿದಲ್ಲಿ ಶೇ.6.50ರಷ್ಟು ಹೆಚ್ಚಳವಾಗಿದ್ದು, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಿಲ್ಲ ವೆಂದು ಆಯೋಗವು ತಿಳಿಸಿದೆ.<br><br>ಮುಂದುವರೆದು, ದಿನಾಂಕ:23-01-2025 ರಂದು ಮುಖ್ಯ ಕಾರ್ಯದರ್ಶಿಯವರು ಸಭೆಯನ್ನು ನಡೆಸಿ, ದಿನಾಂಕ:29-12-2024ರಂದು ನಡೆಸಿದ ಗೆಜೆಟೆಡ್ ಪ್ರೊಬೆಷನರ್ ಪೂರ್ವಭಾವಿ ಮರುಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿನ ಕನ್ನಡ ಭಾಷಾಂತರದಲ್ಲಿ ಉಂಟಾಗಿರುವ ಲೋಪದ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗಗಳ ಸಹಯೋಗದೊಂದಿಗೆ ಒಂದು ಕನ್ನಡ ಭಾಷಾ ತಜ್ಞರ ತಂಡವನ್ನು ರಚಿಸಲು ಪರಿಶೀಲಿಸಲಾಗುತ್ತಿದೆ. |
| ಇ | ಈ ಕೆಎಎಸ್ ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಭಾಷಾಂತರದಲ್ಲಿ ಒಟ್ಟು ಎಷ್ಟು ಲೋಪದೋಷಗಳಿರುವುದನ್ನು ವಿಷಯ ತಜ್ಞರು ಪತ್ತೆ ಹಚ್ಚಿದ್ದಾರೆ ಹಾಗೂ ಯಾವ ಯಾವ ಪ್ರಶ್ನೆಗಳಿಗೆ ಗ್ರೇಸ್ ಅಂಕಗಳನ್ನು ನೀಡಲಾಗಿದೆ; (ವಿಷಯ ತಜ್ಞರ ಹೆಸರುಗಳ ಸಮೇತ ಸಮಿತಿಯ ಸಂಪೂರ್ಣ ವಿವರ ನೀಡುವುದು) | ದಿನಾಂಕ:29-12-2024ರಂದು ನಡೆದ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರು ಪರೀಕ್ಷೆಯ ಪತ್ರಿಕೆ-1ರಲ್ಲಿ 32 ಪ್ರಶ್ನೆಗಳು ಮತ್ತು ಪತ್ರಿಕೆ-2ರಲ್ಲಿ 29 ಪ್ರಶ್ನೆಗಳು, ಒಟ್ಟು 61 ಪ್ರಶ್ನೆಗಳ ಕನ್ನಡ ಭಾಷಾಂತರದಲ್ಲಿ ಲೋಪವಿರುವುದಾಗಿ ಅಭ್ಯರ್ಥಿಗಳು ಹಾಗೂ ಸಂಘ/ಸಂಸ್ಥೆಗಳು ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಮೂವರು ವಿಷಯ ತಜ್ಞರುಗಳನ್ನೊಳಗೊಂಡಂತೆ ಒಟ್ಟು 12 ವಿಷಯಗಳ ವಿಷಯ ತಜ್ಞರುಗಳ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಭಾಷಾಂತರ ಹಾಗೂ ತಾಂತ್ರಿಕ ದೋಷದಿಂದಾಗಿ ಪರಿಷ್ಕರಿಸಬೇಕೆಂದು ತಿಳಿಸಿರುವ ಪ್ರಶ್ನೆಗಳ ಹಾಗೂ ಸಮಿತಿಯ ಅಭಿಪ್ರಾಯವು ಈ ಕೆಳಕಂಡಂತಿದೆ. |

**ಪತ್ರಿಕೆ - 1**

| ಕ್ರ. ಸಂ. | ಪ್ರಶ್ನೆ ಸಂಖ್ಯೆ | ಪ್ರಕಟಿಸಲಾದ ಕೀ ಉತ್ತರ | ಪರಿಷ್ಕೃತ ಕೀ ಉತ್ತರ | ಸಮಿತಿಯ ಅಭಿಪ್ರಾಯ |
|---|---|---|---|---|

| | | | | |
|---|---|---|---|---|
| 1 | 21 | 1 | ಕೃಪಾಂಕ | ಭಾಷಾಂತರ ಲೋಪದಿಂದಾಗಿ |
| 2 | 50 | 2 | 2 ಅಥವಾ 3 ಅಥವಾ 4 | ಭಾಷಾಂತರ ಲೋಪದಿಂದಾಗಿ |
| 3 | 66 | 2 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |
| 4 | 94 | 2 | ಕೃಪಾಂಕ | ಭಾಷಾಂತರ ಲೋಪದಿಂದಾಗಿ |

**ಪತ್ರಿಕೆ - 2**

| ಕ್ರ. ಸಂ. | ಪ್ರಶ್ನೆ ಸಂಖ್ಯೆ | ಪ್ರಕಟಿಸಲಾದ ಕೀ ಉತ್ತರ | ಪರಿಷ್ಕೃತ ಕೀ ಉತ್ತರ | ಸಮಿತಿಯ ಅಭಿಪ್ರಾಯ |
|---|---|---|---|---|
| 1 | 60 | 2 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |
| 2 | 97 | 1 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |

ವಿಷಯ ತಜ್ಞರುಗಳ ಹೆಸರುಗಳನ್ನು ಗೌಪ್ಯತೆಯ ದೃಷ್ಟಿಯಿಂದ ಹಾಗೂ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿಯಿರುವುದರಿಂದ ಬಹಿರಂಗ ಪಡಿಸಲು ಸಾಧ್ಯವಿರುವುದಿಲ್ಲ.

| | | |
|---|---|---|
| ಈ | ಪ್ರತಿ ಬಾರಿ ಕೆಎಎಸ್ ಪೂರ್ವಭಾವಿ ಪರೀಕ್ಷೆ ಫಲಿತಾಂಶದ ಜೊತೆಗೆ ಕಟ್ ಆಫ್ ಅಂಕಗಳನ್ನು ಕೂಡ ಪ್ರಕಟಿಸಲಾಗುತ್ತಿತ್ತು ಆದರೆ ಆಯೋಗವು ಈ ಬಾರಿ ಕಟ್ ಆಫ್ ಅಂಕಗಳನ್ನು ಬಿಡುಗಡೆ ಮಾಡದೇ ಇರಲು ಕಾರಣವೇನು; | 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ 384 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗವು ಕಟ್‌ಆಫ್ ಅಂಕಗಳನ್ನು ಪ್ರಕಟಿಸುವ ಕುರಿತು ಕೇಂದ್ರ ಲೋಕಸೇವಾ ಆಯೋಗದ ಮಾದರಿಯನ್ನು ಅನುಸರಿಸಲಾಗುತ್ತಿದೆ. |

| | | |
|---|---|---|
| ಉ | ಈ ಪರೀಕ್ಷೆಗೆ ಒಟ್ಟು ಎಷ್ಟು ಜನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ; ಸಂಗ್ರಹವಾದ ಒಟ್ಟು ಅರ್ಜಿ ಶುಲ್ಕ ಎಷ್ಟು; ಎಷ್ಟು ಜನ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗೆ ಹಾಜರಾಗಿದ್ದಾರೆ? (ಪರೀಕ್ಷೆಯ ವೆಚ್ಚದ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚಿಸಿರುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ 384 ಹುದ್ದೆಗಳ ನೇಮಕಾತಿಗೆ ಒಟ್ಟು 2,10,916 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಸಂಗ್ರಹವಾದ ಒಟ್ಟು ಅರ್ಜಿ ಶುಲ್ಕ ರೂ.3,74,48,450/- ಆಗಿರುತ್ತದೆ.<br><br>ದಿನಾಂಕ:29-12-2024ರಂದು ನಡೆಸಲಾದ ಪೂರ್ವಭಾವಿ ಮರುಪರೀಕ್ಷೆಯ ಪೂರ್ವಾಹ್ನ ಅಧಿವೇಶನಕ್ಕೆ (ವಿಷಯ ಸಂಕೇತ 589) ಒಟ್ಟು 1,00,990 ಅಭ್ಯರ್ಥಿಗಳು ಹಾಗೂ ಅಪರಾಹ್ನ ಅಧಿವೇಶನಕ್ಕೆ (ವಿಷಯ ಸಂಕೇತ 590) ಒಟ್ಟು 1,00,452 ಅಭ್ಯರ್ಥಿಗಳು ಹಾಜರಾಗಿರುತ್ತಾರೆ.<br><br>ಆಯೋಗವು ದಿನಾಂಕ: 29.12.2024ರಂದು ನಡೆಸಿರುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗೆ ತಗುಲಿರುವ ಒಟ್ಟು ವೆಚ್ಚ ಕೆಳಕಂಡಂತಿದೆ. |

| ಕ್ರ. ಸಂ | ವಿವರ | ರೂ.ಗಳಲ್ಲಿ |
|---|---|---|
| 1 | 29 ಜಿಲ್ಲೆಗಳಲ್ಲಿ ನಿಯೋಜಿಸಲಾಗಿದ್ದ ಅಧಿಕಾರಿ/ ಸಿಬ್ಬಂದಿಗಳ ಸಂಭಾವನೆ ಮೊತ್ತ | 47,62,600.00 |
| 2 | 553 ಪರೀಕ್ಷಾ ಉಪಕೇಂದ್ರಗಳ ಸಂಭಾವನೆ ಮೊತ್ತ | 4,17,60,336.00 |
| 3 | ಸ್ಥಳೀಯ ನಿರೀಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಂಭಾವನೆ ಮೊತ್ತ | 1,27,200.00 |
| 4 | ಪ್ರಶ್ನೆ ಪತ್ರಿಕೆ, ಓ.ಎಂ.ಆರ್. ನಾಮಿನಲ್ ಹಾಳೆಗಳ ಮುದ್ರಣ | 3,85,57,794.00 |
| 5 | ಜಾಮರ್ಸ್ ಅಳವಡಿಸುವ ಕಾರ್ಯನಿರ್ವಹಣೆ | 1,04,52,997.00 |
| 6 | ಫ್ರಿಸ್ಕಿಂಗ್ | 1,05,45,800.00 |
| 7 | ಫೇಸ್ ರೆಕಗ್ನಿಷನ್ | 97,02,136.00 |

| | | | | |
|---|---|---|---|---|
| | | 8 | ಸಿ.ಸಿ.ಕ್ಯಾಮರಾ ಅಳವಡಿಸುವುದು | 1,52,59,422.00 |
| | | 9 | ಲಘುವಾಹನಗಳ ಬಾಡಿಗೆ ವೆಚ್ಚ | 5,04,209.00 |
| | | 10 | ಕೊರಿಯರ್ ಸೇವೆಯ ವೆಚ್ಚ | 3,36,949.00 |
| | | 11 | ನಮೂನೆಗಳು ಮತ್ತು ಪರೀಕ್ಷಾ ಕೈಪಿಡಿ ಮುದ್ರಣ ವೆಚ್ಚ | 4,40,942.00 |
| | | | ಒಟ್ಟು | 13,24,50,385.00 |
| | | | | |

ಸಂಖ್ಯೆ:ಸಿಆಸುಇ 41 ಎಸ್‌ಎಸ್‌ಸಿ 2025

(ಸಿದ್ಧರಾಮಯ್ಯ)

**ಮುಖ್ಯಮಂತ್ರಿ**